ಮೂಲ ದಾವಾ ಸಂಖ್ಯೆ 88 /2015 ಪಿ ಡಬ್ಲ್ಯೂ 1 ಶ್ರೀಮತಿ ಬಿ. ಲೀಲಾವತಿ
ಕೋಂ ಲೇಟ್ ಸತ್ಯನಾರಾಯಣಆಚಾರ್

(ದಿನಾಂಕ 12-09-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮಧ್ಯಂತರ ಅರ್ಜಿ ಸಂಖ್ಯೆ: ೯ ಮತ್ತು ೧೦ ರ ಆದೇಶದ ಮೇರೆಗೆ

ಪಾಟೀ ಸವಾಲು 1 ಮತ್ತು ೨ ನೇ ಪ್ರತಿವಾದಿ ಪರ ಶ್ರೀ ಬಿ ಪಿ ವಕೀಲರಿಂದಃ-

ನನ್ನ ವಾದಪತ್ರ್ರದ ಶೆಡ್ಯೂಲ್ ಮೊದಲನೇ ಭಾಗದಲ್ಲಿ ಉತ್ತರಕ್ಕೆ ೬೦ ಅಡಿ ರಸ್ತೆ ಇರುವ ಬಗ್ಗೆ ಬಸಲಾಗಿರುತ್ತದೆಂದರೆ ಸರಿ. ದಾವಾ ಸ್ವತ್ತಿನಲ್ಲಿ ಜೆಂಕ್ ಶೀಟಿನ ತಗಡಿನ ಮನೆಯನ್ನು ಹಾಕಿಕೊಂಡಿರುತ್ತೇನೆಂದರೆ ಸಾಕ್ಷಿಯು ನನ್ನ ಗಂಡ ಇದ್ದ ಕಾಲದಲ್ಲಿ ಹಾಕಿದಂತಹ ಜೆಂಕ್ ಶೀಟಿನ ಮನೆಯಾಗಿತ್ತು ಎಂದು ನುಡಿಯುತ್ತಾರೆ. ಸದರಿ ಜಾಗದ ಒಂದು ಭಾಗದಲ್ಲಿ ಜೆಂಕ್ ಶೀಟಿನ ಮನೆ ಮತ್ತು ಇನ್ನೊಂದು ಭಾಗದಲ್ಲಿ ಹಿಟ್ಟಿನ ಗಿರಣಿ ಇರುವ ಬಗ್ಗೆ ಬರೆಸಲಾಗಿರುತ್ತದೆಂದರೆ ಸರಿ. ನಮ್ಮ ಜೆಂಕ್ ಶೀಟಿನ ಮನೆಯ ಮುಂದೆ ಯಾವುದೇ ಜಾಗ ಇರುವುದಿಲ್ಲ. ನನ್ನ ಜೆಂಕ್ ಶೀಟಿನ ಮನೆಯ ಉತ್ತರಕ್ಕೆ ಬಾಗಿಲು ಇರುತ್ತದೆಂದರೆ ಸರಿ. ಉತ್ತರಕ್ಕೆ ಇರುವ ಬಾಗಿಲಿನಿಂದ ಒಟ್ಟು 11 ವರೆ ಅಡಿ ರಸ್ತೆ ಇರುತ್ತದೆಂದರೆ ಸರಿಯಲ್ಲ. ಜೆಂಕ್ ಶೀಟಿನ ತಗಡಿನ ಮನೆಯು ಉತ್ತರದಿಂದ ದಕ್ಷಿಣಕ್ಕೆ ೨೩ ಅಡಿ ಇರುತ್ತದೆ. ಜೆಂಕ್ ಶೀಟಿನ ಮನೆಯ ದಕ್ಷಿಣ ದಿಕ್ಕಿಗೆ ಒಂದು ಇಟ್ಟಿಗೆಯಿಂದ ಕಟ್ಟಿದ ಮನೆಯು ಅರ್ಧಕ್ಕೆ ಕಟ್ಟಲಾಗಿರುತ್ತದೆಂದರೆ ಸರಿ. ಇಟ್ಟಿಗಿ ಮನೆಯ ಉದ್ದ ಅಳತೆ ನನಗೆ ಗೊತ್ತಿರುವುದಿಲ್ಲ. ಇಟ್ಟಿಗೆ ಮನೆಯು ಉ-ದ 15 ಅಡಿ ಇರುತ್ತದೆಂದರೆ ಸರಿಯಲ್ಲ. ಜೆಂಕ್ ಶೀಟಿನ ಮನೆಯು ಉ-ದ ಕ್ಕೆ ೨4 ವರೆ ಅಡಿ ಇರುತ್ತದೆಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತಿನ ಸರ್ವೆ ಸ್ಕೆಚ್ಚನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿರುತ್ತದೆ. ಇಟ್ಟಿಗೆ ಮನೆಯನ್ನು ಕಟ್ಟಲು ಪರವಾನಿಗೆಯನ್ನು ತೆಗೆದುಕೊಂಡಿರುತ್ತೇನೆ. ಸದರಿ ಪರವಾನಿಗೆಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿರುತ್ತದೆ. ನನ್ನ ಸ್ವತ್ತಿನಿಂದ ಉತ್ತರ ದಿಕ್ಕಿನ ರಸ್ತೆ

ಮೂಲ ದಾವಾ ಸಂಖ್ಯೆ 88 /2015 ಪಿ ಡಬ್ಲ್ಯೂ 1 ಶ್ರೀಮತಿ ಬಿ. ಲೀಲಾವತಿ
ಕೋಂ ಲೇಟ್ ಸತ್ಯನಾರಾಯಣಆಚಾರ್

ಹಾಗೂ 2 ನೇ ಪ್ರತಿವಾದಿಯಾದ ಬಾಬುಸಾಬ್ ರವರ ಮನೆಯವರೆಗೆ ಅಳತೆ ಮಾಡಿಸಲು ನನ್ನ ತಕರಾರು ಇರುತ್ತದೆ. ನಾನು ಕಟ್ಟಿದಂತಹ ಜೆಂಕ್ ಶೀಟಿನ ಮನೆಯ ಹೊಸಿಲಿನಿಂದ ಉತ್ತರದ ರಸ್ತೆಯವರೆಗೂ 11 ವರೆ ಅಡಿ, ಜೆಂಕ್ ಶೀಟ್ ಮನೆಯ ಉ-ದ ಅಳತೆಯು 24 ವರೆ ಅಡಿ, ಇಟ್ಟಿಗಿ ಮನೆಯ ಉ-ದ ಅಳತೆಯು 15 ಅಡಿ ಹೀಟೆ ಒಟ್ಟು 51 ಅಡಿ ಇರುತ್ತದೆಂದರೆ ಸರಿಯಲ್ಲ. ಕಾರಣ 2 ನೇ ಪ್ರತಿವಾದಿ ಯಾವುದೇ ಸ್ವತ್ತನ್ನು ಒತ್ತುವರಿ ಮಾಡಿರುವುದಿಲ್ಲ ಹಾಗೂ ನನ್ನ ಸ್ವಾಧೀನದಲ್ಲಿ ಅಡ್ಡಿ ಆತಂಕವನ್ನು ಉಂಟುಪಡಿಸಿರುವುದಿಲ್ಲವೆಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ

ಹಗರಿಬೊಮ್ಮನಹಳ್ಳಿ